ತೋರ್ಪಡಿಸಲು ನೀರಿನ ಮೇಲ್ಮಟ್ಟಕ್ಕೆ ಬರುವ ಮೀನುಗಳು, ಒಂದು ಭಾಗದಲ್ಲಿ ಅರಣ್ಯ ಇಲಾಖೆಯ ಸುಪರ್ದಿಯಲ್ಲಿರುವ ಜಾಗದಲ್ಲಿ ಬೆಳೆದಿರುವ ದಟ್ಟಡವಿಯನ್ನು ನೆನಪಿಸುವ ದೊಡ್ಡ ದೊಡ್ಡ ಮರಗಳು, ಅದರ ಹಿಂದೆ ಅವರ ವಸತಿ ಗೃಹಗಳು, ಇತ್ಯಾದಿ ಎಲ್ಲವೂ ಈ ಕೆರೆಯನ್ನು ಮನಸಿಗೆ ಮುದ ಹಾಗೂ ನೆಮ್ಮದಿ ನೀಡುವ ಒಂದು ತಾಣವಾಗಿಸಿದೆ.

ಒಂಟಿಯಾಗಿ ತಿರುಗಾಡುವ ನನ್ನಂತಹವನಿಗೆ ಇದು ಬೆಳಗಿನ ಹಾಗೂ ಸಾಯಂಕಾಲದ ಸಮಯದಲ್ಲಿ ಚಿಕ್ಕಪೇಟೆಯ ರಸ್ತೆ ಅಥವಾ ರಾಜಾ ಮಾರ್ಕೆಟ್ಟಿನ ಸಂದಿಯಂತೆ ಕಾಣುತ್ತದೆ – ಅಷ್ಟು ಜನಜಂಗುಳಿ. ಹೀಗಾಗಿ ಇಷ್ಟವಿದ್ದರೂ ಸಹಿತ ನಾನು ಇಲ್ಲಿ ನಡೆದಾಡಲು ಹೋಗುವುದು ಅಪರೂಪ. ಹೊರಗಿನಿಂದಲೇ ಕಣ್ಣು ಹಾಯಿಸಿ, ಹೆಚ್ಚಿಗೆ ಜನರಿದ್ದರೆ ಪಕ್ಕದ ರಸ್ತೆಯಲ್ಲಿ ಮಲ್ಲೇಶ್ವರದ ಕಡೆಯಿಂದ ಸದಾಶಿವನಗರಕ್ಕೆ ಹೋಗುವ ರಸ್ತೆಯಲ್ಲಿ ನಡೆಯುತ್ತೇನೆ. ಕಮ್ಮಿ ಜನರಿರುವ ಸಮಯದಲ್ಲಿ ಮಾತ್ರ ಒಳಗೆ ಹೋಗುತ್ತೇನೆ.

ಹೀಗೆ ಇತ್ತೀಚೆಗೆ ಒಳಗೆ ನಡೆಯುತ್ತಿದ್ದಾಗ ಕಂಡ ದೃಶ್ಯದಿಂದ ಚಕಿತನಾಗಿಬಿಟ್ಟೆ. ಸದಾಶಿವನಗರದ ರಸ್ತೆಯ ಕಡೆಯ ದಂಡೆಯ ಹತ್ತಿರ ನೀರಿನ ಮಧ್ಯದಲ್ಲಿ ಒಂದು ಮರ ಹಾಗೂ ಅದರಿಂದ ಸ್ವಲ್ಪವೇ ದೂರದಲ್ಲಿ ಮತ್ತೊಂದು ಮರ. ಎರಡೂ ನೀರಿನ ನಡುವೆಯೇ. ಆದರೆ ಎರಡೂ ಸಂಪೂರ್ಣ ಒಣಗಿಹೋಗಿ, ಸತ್ತುಹೋಗಿವೆ. ಹಸಿರಿನ ಅಥವಾ ಜೀವದ ಸ್ವಲ್ಪ ಲಕ್ಷಣವೂ ಇಲ್ಲ. ಕಪ್ಪಗಾಗಿರುವ ಮುಖ್ಯ ದೇಹ, ಅದರಿಂದ ಕವಲೊಡೆದಿರುವ ಅಷ್ಟೇ ಕಪ್ಪಗಾಗಿರುವ ಒಂದೆರಡು ಕೊಂಬೆಗಳು – ಒಂದು ಕಾಲದಲ್ಲಿ ಜೀವ ಇದ್ದು, ಹಸಿರಿನಿಂದ ತುಂಬಿ ತುಳುಕಾಡುತ್ತಿದ್ದಿರಬಹುದು. ಎಂದಿನ ಅಭ್ಯಾಸದಂತೆ ನನ್ನ ಮೊಬೈಲ್‌ನಲ್ಲಿ ಅವುಗಳನ್ನು ಸೆರೆ ಹಿಡಿದೆ.

ಮರಗಳೂ ಜೀವಿಗಳೇ. ಅವಕ್ಕೂ ಅಂತ್ಯ ಇರುತ್ತದೆ ಎಂಬುದು ನಿರ್ವಿವಾದ. ಆದರೆ, ಸರ್ವ ಕಾಲ ಬಿಸಿಲು, ಮಳೆ, ಸುತ್ತಲೂ ಜಲರಾಶಿ – ಇಷ್ಟಾಗಿ ಈ ಮರಗಳು ಈ ರೀತಿ ಅಂತ್ಯ ಕಂಡಿರುವುದು ನನಗೆ ಕಲ್ಪನಾತೀತ ವಿಷಯ. ಅದೇ ಕೆರೆಯಲ್ಲಿ ಇನ್ನೂ ನಾಲ್ಕೈದು ಮರಗಳಿವೆ. ಅವುಗಳ ಎತ್ತರ, ಬೆಳವಣಿಗೆ ಇತ್ಯಾದಿಗಳ ಪ್ರಕಾರ, ಅವೆಲ್ಲವುಗಳ ವಯಸ್ಸು ಅಂದಾಜಿನಲ್ಲಿ ಒಂದೇ ಇರಬೇಕು. ಮಿಕ್ಕವೆಲ್ಲ ಹಸಿರಿನಿಂದ ನಳನಳಿಸುತ್ತಿರುವಾಗ ಈ ಎರಡು ಮರಗಳು ಮಾತ್ರ ಏಕೆ ಹೀಗೆ? ನೀರಿನ ಮಧ್ಯೆ ಇರುವುದರಿಂದ, ಯಾರೂ ಹೋಗಿ ರೆಂಬೆಗಳನ್ನು ಕಡಿದು ಮರವನ್ನು ಬೇಕಂತಲೇ ಸಾಯಿಸಿರುವ ಸಾಧ್ಯತೆ ಇಲ್ಲವೆನಿಸಿತು. ಮತ್ತೆ ಹೇಗೆ?

## ಉಪಸಂಹಾರ – ಅಡಿಗರ ಕವಿತೆ

ನನ್ನ ಹುಟ್ಟೂರಾದ ಮೈಸೂರಿನಲ್ಲಿ ಚಿಕ್ಕಂದಿನಲ್ಲಿ ಗಣೇಶೋತ್ಸವದಲ್ಲಿ ಕನ್ನಡದ ಕೋಗಿಲೆ ಕಾಳಿಂಗರಾಯರ ಸಂಗೀತ ಕಛೇರಿಗೆ ನಮ್ಮ ಪಡ್ಡೆ ಹುಡುಗರ ಗುಂಪು ತಪ್ಪದೇ ಹೋಗುತ್ತಿದ್ದೆವು. 'ನಾನು ಕೋಳಿಕೆ ರಂಗ' ಹಾಡು ನಮಗೆಲ್ಲಾ ಅತ್ಯಂತ ಪ್ರಿಯವಾದುದು. ಹಾಡಿನ ಮಧ್ಯದಲ್ಲಿ ಇದ್ದಕ್ಕಿದ್ದಂತೆ ಪಕ್ಕವಾದ್ಯಗಳೆಲ್ಲ ನಿಂತುಹೋಗಿ, ಕಾಳಿಂಗರಾಯರು ಗಟ್ಟಿ ಧ್ವನಿಯಲ್ಲಿ 'ಏ – ಏನೋ – ಯಾಕೋ' ಎಂದು ಕೇಳಿ, ಸ್ಟೇಜಿನ ಒಂದು ತುದಿಗೆ ಬಂದು ನಿಂತು, ತಮ್ಮ ಮಾಮೂಲು ಧ್ವನಿಯಲ್ಲಿ 'ನಾನು ಕೋಳಿಕೆ ರಂಗ' ಎಂದು ಹಾಡಿದಾಗ ಪಕ್ಕವಾದ್ಯಗಳೆಲ್ಲ ಮತ್ತೆ ಪ್ರಾರಂಭವಾಗಿ ಹಾಡು ಮುಂದುವರೆದರೆ, ನಮ್ಮ ಪಡ್ಡೆ ಹುಡುಗರ ತಂಡಕ್ಕೆ ಆ ವರ್ಷದ ಗಣೇಶೋತ್ಸವ ಸಂಪೂರ್ಣವಾದಂತೆ. ಹೀಗೇ ಒಂದು ಕಾರ್ಯಕ್ರಮದಲ್ಲಿ ಗೋಪಾಲಕೃಷ್ಣ ಅಡಿಗರ 'ಅಳುವ ಕಡಲೊಳು ತೇಲಿ ಬರುತಲಿದೆ ನಗೆಯ ಹಾಯಿದೋಣಿ' ಕೇಳಿದ್ದ ನೆನಪು.



ಆದರೆ, ಅದರ ಪದಗಳಾಗಲೀ ಅಥವಾ ಭಾವಾರ್ಥವಾಗಲೀ ತಿಳಿಯದ ವಯಸ್ಸು. ಅದಾದ ಬಹಳ ವರ್ಷಗಳ ನಂತರ ಭಾವಗೀತೆಗಳ ಪ್ರೇಮಿಯಾಗಿ, ಕವನಗಳ ಭಾವಾರ್ಥವನ್ನು ಹುಡುಕುವ ಮತ್ತು ಅರ್ಥ ಮಾಡಿಕೊಳ್ಳುವ ವಯಸ್ಸಿನಲ್ಲಿ ಶಿವಮೊಗ್ಗ ಸುಬ್ಬಣ್ಣನವರ ಕಂಚಿನ ಕಂಠದಲ್ಲಿ ಅದೇ ಗೀತೆಯನ್ನು ಕೇಳಿದೆ. ತಕ್ಷಣ ಎಲ್ಲೆಲ್ಲೊ ಹುಡುಕಾಡಿ, ಅಡಿಗರ ಆ ಗೀತೆಯನ್ನು ಓದಿ, ಜೀವನದ ವೈರುಧ್ಯಗಳನ್ನು ಅಥವ ವಿರೋಧಾಭಾಸಗಳನ್ನು ಪದಗಳಲ್ಲಿ ಬಣ್ಣಿಸಿರುವ ರೀತಿಗೆ ಮರುಳಾಗಿದ್ದೆ.

ಮೇಲಿನ ಮೂರೂ ಅಧ್ಯಾಯಗಳಲ್ಲಿ ಹೇಳಿರುವ ವಿಷಯಗಳು ಬೇರೆಬೇರೆ ಸಮಯದಲ್ಲಿ ನನ್ನ ಕಣ್ಣಿಗೆ ಬಿದ್ದ ಘಟನೆಗಳು. ನಿಜ ಹೇಳಬೇಕೆಂದರೆ, ಮೊದಲೆರಡು ಘಟನೆಗಳು ನಡೆದಾಗ ನಾನು ಬಹಳ ಯೋಚಿಸಿರಲಿಲ್ಲ. ನೋಡಿದೆ, ಆಶ್ಚರ್ಯವಾಯಿತು, ಮರೆತುಬಿಟ್ಟೆ. ಆದರೆ, ಸ್ಯಾಂಕಿ ಕೆರೆಯಲ್ಲಿ ನೀರಿನ ನಡುವೆ ಇದ್ದೂ ಬಾಡಿ ಒಣಗಿ ಹೋಗಿರುವ ಮರಗಳನ್ನು ನೋಡಿದಾಗ, ತಕ್ಷಣ ಅಡಿಗರ ಈ ಕವನ ನೆನಪಾಯಿತು. ಜೊತೆಗೇ, ಮೂರನೇ ಅಂತಸ್ತಿನಲ್ಲಿ ಚಿಗುರೊಡೆದು ಬದುಕುತ್ತಿರುವ ತುಳಸಿ ಗಿಡ ಹಾಗೂ ನರಿಮನ್ ಪಾಯಿಂಟಿನ ಐದನೇ ಅಂತಸ್ತಿನ ಗುಬ್ಬಿ ಕುಟುಂಬ ಒಟ್ಟಿಗೇ ನೆನಪಾದವು. ಅಡಿಗರ ಕವನದಲ್ಲಿನ ಜೀವನದ ವಿರೋಧಾಭಾಸಗಳು ಬೇರೆ ಬೇರೆ ಘಟನೆಗಳಿಂದ ಚಲನಚಿತ್ರೋಪಾದಿಯಲ್ಲಿ ನನಗೆ ದರ್ಶನವಾಗುತ್ತಿದೆಯೋ ಎಂಬ ಭಾವನೆ ಮೂಡಿದ್ದು ಸುಳ್ಳಲ್ಲ.

ಅವತ್ತು ಸಂಜೆ ಸ್ಯಾಂಕಿ ಕೆರೆಯ ದಂಡೆಯಲ್ಲಿ ಕುಳಿತು, ಮೊಬೈಲ್‌ನಲ್ಲಿ ಶಿವಮೊಗ್ಗ ಸುಬ್ಬಣ್ಣನವರ ಆ ಹಾಡನ್ನು ಹುಡುಕಿ, ಆ ಮರವನ್ನೇ ನೋಡುತ್ತಾ, ಕನಿಷ್ಠ ಐದಾರು ಬಾರಿಯಾದರೂ ಕೇಳಿದೆ. 'ಬಾಳ ಗಂಗೆಯ ಮಹಾಪೂರದೊಳು ಸಾವಿನೊಂದು ವೇಣಿ' ಎಂಬ ಸಾಲಿಗೆ ಸಾಕ್ಷಿಯೆಂಬಂತೆ ಕಣ್ಣ ಮುಂದಿದ್ದ ಮರ ಕಾಣುತ್ತಿತ್ತು. 'ಆಸೆ ಬೂದಿ ತಳದಲ್ಲೂ ಕೆರಳುತಿದೆ ಕಿಡಿಗಳೆನಿತೊ ಮರಳಿ; ಮುರಿದು ಬಿದ್ದ ಮನ ಮರದ ಕೊರಡೊಳು ಹೂವು ಹೂವು ಅರಳಿ' ಎಂಬ ಸಾಲಿಗೆ ಸಾಕ್ಷಿಯೆಂಬಂತೆ ತುಳಸಿ ಗಿಡ ಹಾಗೂ ಗುಬ್ಬಿ ಸಂಸಾರ ಕಣ್ಣ ಮುಂದೆ ಬರುತ್ತಿದ್ದವು. ಕಾವಲಿನವ ಸೀಟಿ ಹೊಡೆಯುತ್ತ ಬಂದು ಎಂಟು ಗಂಟೆಯಾಯಿತೆಂದು ಹೊರಡಲು ಹೇಳಿದಾಗಲೇ ನನಗೆ ಎಚ್ಚರ.

ನಾನು ಸಾಹಿತ್ಯದ ವಿದ್ಯಾರ್ಥಿಯಲ್ಲ. ಆದರೆ, ಕನ್ನಡ ಪ್ರೇಮಿಯಾಗಿ ಅದರಲ್ಲೂ ಭಾವಗೀತೆಗಳಲ್ಲಿ ಆಸಕ್ತಿ ಹೊಂದಿದವನಾಗಿ ನನಗೆ ಅನಿಸಿದ್ದು – ಗೋಪಾಲಕೃಷ್ಣ ಅಡಿಗರ ಈ ಕವನದ ಪ್ರತಿಯೊಂದು ಸಾಲಿನಲ್ಲೂ ಜೀವನದಲ್ಲಿ ಕಾಣಸಿಗುವ, ಆದರೆ ನಮ್ಮ ಗಮನಹರಿಯದ ವೈರುಧ್ಯಗಳು ಅತ್ಯಂತ ಸಮರ್ಥವಾಗಿ ಚಿತ್ರಣಗೊಂಡಿವೆ. ಕವನದ ಎರಡನೇ ಚರಣದ ಕೊನೆಯ ಸಾಲುಗಳಾದ 'ಇದು ಬಾಳು ನೋಡು ಇದು ತಿಳಿದೆನೆಂದರೂ ತಿಳಿದ ಧೀರನಿಲ್ಲ, ಹಲವು ತನದ ಮೈ ಮರೆಸುವಾಟವಿದು ನಿಜವು ತೋರದಲ್ಲ' ಜೀವನದ ಸಾರವನ್ನೇ ಹಿಡಿದಿಟ್ಟಿದೆಯೋ ಎಂದು ತೋರುತ್ತದೆ. ಜೀವನದ ಕೆಲವು ಘಟನೆಗಳು ಬೆಲ್ಲದ ಸಿಹಿಯಾದರೆ, ಇನ್ನು ಕೆಲವು ಘಟನೆಗಳು ಬೇವಿನ ಕಹಿಯೂ ಹೌದು. ಎರಡರ ಮಿಶ್ರಣವನ್ನು ಹೊಸ ವರ್ಷದ ಮೊದಲ ದಿನ ಯುಗಾದಿಯಂದು ತಿಂದು, ಎರಡನ್ನೂ ವರ್ಷದುದ್ದಕ್ಕೂ ಸಮಭಾವದಿಂದ ಸ್ವೀಕರಿಸಬೇಕೆಂಬ ನಮ್ಮ ಸಂಪ್ರದಾಯಕ್ಕೆ ಪುಷ್ಟಿ ಕೊಡುವಂತಹ ಸಾಲುಗಳು.

ಸ್ಯಾಂಕಿ ಕೆರೆ ದಂಡೆಯಲ್ಲಿ ಕುಳಿತು ಅವತ್ತು ಅಡಿಗರಿಗೆ ಮನದಲ್ಲಿಯೇ ನಮನ ಸಲ್ಲಿಸಿದ್ದೆ.

ತುಳಸಿ ಗಿಡ, ಗುಬ್ಬಿ ಕುಟುಂಬ ಹಾಗೂ ಒಣಗಿಹೋದ ಮರದ ಮೂಲಕ ಸ್ವಲ್ಪ ಮಟ್ಟಿಗಾದರೂ ಅರಿವಾದ ಅಡಿಗರ ಸೂಕ್ಷ್ಮ ದೃಷ್ಟಿಯ ದೈತ್ಯ ಪ್ರತಿಭೆಗೆ ಈ ಲೇಖನದ ಮೂಲಕ ಮತ್ತೊಮ್ಮೆ ನಮನಗಳು.

ಪ್ರತಿಕ್ರಿಯಿಸಿ: feedback@sudha.co.in